# ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ

ಸುತ್ತೋಲೆ ಸಂಖ್ಯೆ: 157 16.01.2008

ವಿಷಯ : ರೀಟೇಲರ್ಸ್‌ಗಳಿಂದ ಕೆ.ಎಸ್.ಬಿ.ಸಿ.ಎಲ್‌ಗೆ ಮದ್ಯ ಮಾರಾಟಕ್ಕೆ ಸಂಬಂಧಿಸಿದಂತೆ ಪಾವತಿಯಾಗಬೇಕಾದ ಹಣವನ್ನು ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ / ಡಿ.ಡಿ. ಮೂಲಕ ಪಡೆಯುವ ಬಗ್ಗೆ.

****

ನಿಗಮವು ಇದುವರೆಗೆ ರೀಟೇಲರ್ಸ್‌ಗಳಿಂದ ಪಡೆಯಬೇಕಾದ ಮದ್ಯಮಾರಾಟದ ಹಣವನ್ನು ಡಿ.ಡಿ ರೂಪದಲ್ಲಿ ಅಥವಾ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ ರೂಪದಲ್ಲಿ ಪಡೆಯುತ್ತಿದೆ. 17.07.2007 ರಿಂದ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ ಮೂಲಕ ಹಣವನ್ನು ಪಡೆಯುವ ಕ್ರಮವನ್ನು ಪ್ರಾರಂಭಿಸಲಾಗಿದೆ. ಈಗಾಗಲೇ ಸಾಕಷ್ಟು ರೀಟೇಲರ್‌ಗಳು ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ ಸೌಲಭ್ಯವನ್ನು ಉಪಯೋಗಿಸುತ್ತಿದ್ದಾರೆ. ಆದರೂ ಕೂಡ ಅಲ್ಲಲ್ಲಿ ಕೆಲವು ರೀಟೇಲರ್ಸ್‌ಗಳು ಡಿ.ಡಿ ಪದ್ಧತಿಯನ್ನು ಮುಂದುವರಿಸುವಂತೆ ಮತ್ತು ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ ಪದ್ಧತಿ ಅಳವಡಿಸಿಕೊಳ್ಳಲು ಸಮಯಾವಕಾಶವನ್ನು ನೀಡುವಂತೆ ಕೋರಿರುತ್ತಾರೆ. ಫೆಡರೇಶನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಶನ್ ಕರ್ನಾಟಕ, ಬೆಂಗಳೂರು ಮತ್ತು ಕರ್ನಾಟಕ ವೈನ್ ಮರ್ಚಂಟ್ಸ್ ಅಸೋಸಿಯೇಶನ್, ಬೆಂಗಳೂರು ಅವರೂ ಕೂಡಾ ಇದೇ ರೀತಿಯ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಈ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ.

ಈ ಬಗ್ಗೆ ಲೆಕ್ಕಪರಿಶೋಧಕರೊಡನೆ ಚರ್ಚಿಸಲಾಗಿದೆ. ಅವರ ಅಭಿಪ್ರಾಯ ಕೆಳಗಿನಂತಿದೆ :

> ನಿಗಮವು ತನ್ನ ಡಿಪೋಗಳಲ್ಲಿ ಡಿ.ಡಿ.ಯನ್ನು ಪಡೆದ ತಕ್ಷಣ ಸ್ಟಾಕನ್ನು ನೀಡುತ್ತಿದೆ. ಆದರೆ ಡಿ.ಡಿ ಹಣ ನಿಗಮದ ಬ್ಯಾಂಕ್ ಖಾತೆಗೆ ಹಣ ಜಮಾ ಆಗಲು 4 ರಿಂದ 5 ದಿನಗಳಾಗುತ್ತದೆ. ಅಂದರೆ ನಿಗಮದ ಬ್ಯಾಂಕ್ ಖಾತೆಗೆ ಜಮಾ ಆಗುವ ಮೊದಲೇ ಸ್ಟಾಕನ್ನು ನೀಡಲಾಗುತ್ತಿದೆ. ಇದರ ಅರ್ಥ ಸ್ಟಾಕನ್ನು 4 ರಿಂದ 5 ದಿನಗಳ ಕಾಲ ಹಣ ಪಡೆಯದೇ ಕ್ರೆಡಿಟ್ ಮೇಲೆ ನೀಡಲಾಗುತ್ತಿದೆ. ಆದರೆ ಕರ್ನಾಟಕ ಎಕ್ಸೈಸ್ ಲೈಸೆನ್ಸೀಸ್ (ಜೆನೆರಲ್ ಕಂಡೀಷನ್ಸ್) ರೂಲ್ಸ್ 1967ರ ನಿಯಮ 14 ರನ್ವಯ ಕ್ರೆಡಿಟ್ ಸೇಲ್ಸ್‌ನ್ನು ಮಾಡುವ ಹಾಗಿಲ್ಲ. ಆದ್ದರಿಂದ ಸದ್ಯದ ಡಿ.ಡಿ ಸ್ವೀಕರಿಸಿದ ತಕ್ಷಣವೇ ಸ್ಟಾಕನ್ನು ನೀಡುವ ಕ್ರಮವನ್ನು ಮುಂದುವರಿಸುವುದು ಸದರಿ ನಿಯಮದ ಉಲ್ಲಂಘನೆಯಾಗುತ್ತದೆ. ಆದ್ದರಿಂದ ಈ ಕ್ರಮವನ್ನು ಕೂಡಲೇ ನಿಲ್ಲಿಸಬೇಕು.

ಮೇಲ್ಕಂಡ ಅಭಿಪ್ರಾಯದಂತೆ ಡಿ.ಡಿ.ಯನ್ನು ಸ್ವೀಕರಿಸಿದ ತಕ್ಷಣ ಸ್ಟಾಕನ್ನು ಕೊಡುವುದು ಕಾನೂನಿನ ಉಲ್ಲಂಘನೆಯಾಗುವುದರಿಂದ ಅದನ್ನು ಮುಂದುವರಿಸುವುದು ಸಾಧ್ಯವಿಲ್ಲ. ಈ ಬಗ್ಗೆ ರೀಟೇಲರ್‌ಗಳು ಮತ್ತು ಅಸೋಸಿಯೇಷನ್‌ನವರು ಮಾಡಿದ ಮನವಿಯನ್ನು ಗಮನದಲ್ಲಿಟ್ಟುಕೊಂಡು ಈ ಕೆಳಗಿನಂತೆ ರೀಟೇಲರ್‌ಗಳಿಂದ ಮದ್ಯ ಮಾರಾಟದ ಹಣವನ್ನು ಪಡೆಯಲು ನಿರ್ಧರಿಸಲಾಗಿದೆ.

1. ರೀಟೇಲರ್ಸ್‌ಗಳು ಹಣವನ್ನು ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ ಮೂಲಕ ಪಾವತಿಸಿ ತಕ್ಷಣ ಸ್ಟಾಕನ್ನು ಪಡೆಯಬಹುದು.

2. ಸಾಮಾನ್ಯವಾಗಿ ಡಿ.ಡಿ.ಯನ್ನು ಡಿಪೋದಲ್ಲಿ ಸ್ವೀಕರಿಸಿದ ಮೇಲೆ, ಡಿ.ಡಿ.ಯ ಹಣ ನಿಗಮದ ಬ್ಯಾಂಕ್ ಖಾತೆಗೆ ಜಮಾ ಆಗಲು 4 ರಿಂದ 5 ದಿನಗಳು ಬೇಕಾಗುತ್ತದೆ. ಅಂದರೆ ಹೆಚ್ಚಾಗಿ 4 ಅಥವಾ 5ನೇ ದಿನದಂದು ಡಿ.ಡಿ.ಗಳ ಹಣ ನಿಗಮದ ಖಾತೆಗೆ ಜಮಾ ಆಗುತ್ತದೆ. ಆದ್ದರಿಂದ ಒಂದು ವೇಳೆ ಯಾವುದೇ ಕಾರಣಕ್ಕೆ ಡಿ.ಡಿ ಮುಖಾಂತರವೇ ಸಂದಾಯ ಮಾಡಬೇಕೆಂದು ಯಾವುದೇ ರೀಟೇಲರ್ ನಿರ್ಧರಿಸಿದಲ್ಲಿ, ಡಿ.ಡಿ ಸ್ವೀಕರಿಸಿದ ದಿನದಿಂದ 4ನೇ ದಿವಸ ಸ್ಟಾಕನ್ನು ವಿತರಿಸತಕ್ಕದ್ದು.
   (ಉದಾಹರಣೆಗೆ ಹೇಳುವುದಾದರೆ ಸೋಮವಾರ ಡಿ.ಡಿ ಸ್ವೀಕರಿಸಿದರೆ 4ನೇ ದಿನ ಅಂದರೆ ಗುರುವಾರ ಸ್ಟಾಕನ್ನು ವಿತರಿಸತಕ್ಕದ್ದು).

3. ಡಿ.ಡಿ ಯನ್ನು ತರುವುದಾದಲ್ಲಿ, ಒಮ್ಮೆಗೆ ಕೊಳ್ಳಬೇಕಾದ ಸ್ಟಾಕ್‌ಗೆ ಸಂಬಂಧಪಟ್ಟಂತೆ ಒಂದೇ ಡಿ.ಡಿ ಯನ್ನು ತರತಕ್ಕದ್ದು. ಒಂದು transactionಗೆ ಒಂದಕ್ಕಿಂತ ಹೆಚ್ಚು ಡಿ.ಡಿ.ಗಳನ್ನು ಸ್ವೀಕರಿಸಲಾಗುವುದಿಲ್ಲ ಎಂಬುದನ್ನು ಗಮನಿಸುವುದು.
   (ಉದಾಹರಣೆಗೆ ಯಾವುದೇ ಒಂದು ದಿನ 75,000 ರೂಪಾಯಿಗಳ ಮದ್ಯವನ್ನು ರೀಟೇಲರ್ ಕೊಳ್ಳಬೇಕಾದಲ್ಲಿ 75,000 ರೂಪಾಯಿಗಳ ಒಂದೇ ಡಿ.ಡಿ.ಯನ್ನು ನೀಡತಕ್ಕದ್ದು).

ರೀಟೇಲರ್‌ಗಳು, ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್‌ನ್ನು ಈ ಕೆಳಗಿನ 11 ಬ್ಯಾಂಕುಗಳಲ್ಲಿ ಯಾವುದಾದರೊಂದು ಬ್ಯಾಂಕಿನ ಮೂಲಕ ಮಾಡಬಹುದು. ಯಾವುದೇ ಬ್ಯಾಂಕ್‌ನ ಬ್ರ್ಯಾಂಚ್‌ನಲ್ಲಿ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ ಬಗ್ಗೆ ತೊಂದರೆ ಇದ್ದರೆ, ಆಯಾ ಡಿಪೋಮ್ಯಾನೇಜರ್ ಅಥವಾ ಆಯಾಯ ಬ್ಯಾಂಕಿನ ಕೋ-ಆರ್ಡಿನೇಟಿಂಗ್ ಆಫೀಸರ್ ಅವರನ್ನು ಸಂಪರ್ಕಿಸಬಹುದು.

ಬ್ಯಾಂಕುಗಳು ಮತ್ತು ಆಯಾ ಬ್ಯಾಂಕಿನ ಕೋ-ಆರ್ಡಿನೇಟಿಂಗ್ ಆಫೀಸರ್‌ಗಳ ವಿವರ ಕೆಳಗಿನಂತಿವೆ :

| ಬ್ಯಾಂಕಿನ ಹೆಸರು | ಬ್ಯಾಂಕಿನ ಕೋ-ಆರ್ಡಿನೇಟಿಂಗ್ ಆಫೀಸರ್ | ದೂರವಾಣಿ ಸಂಖ್ಯೆ |
|---|---|---|
| ಎಸ್.ಬಿ.ಐ | ಶ್ರೀ ಆರ್.ಎಸ್. ರಮೇಶ್, ಸಹಾಯಕ ಪ್ರಧಾನ ವ್ಯವಸ್ಥಾಪಕರು | 9448993310 |
| ಎಸ್.ಬಿ.ಎಂ | ಶ್ರೀ ರಮೇಶ್, ಮುಖ್ಯ ವ್ಯವಸ್ಥಾಪಕರು | 9845582278 |
| ಸಿಂಡಿಕೇಟ್ ಬ್ಯಾಂಕ್ | ಶ್ರೀ ಪಿ.ಜಿ. ಕುಲಕರ್ಣಿ, ಸಹಾಯಕ ಪ್ರಧಾನ ವ್ಯವಸ್ಥಾಪಕರು | 9449860051 |
| ಕೆನರಾ ಬ್ಯಾಂಕ್ | ಶ್ರೀಮತಿ ಲಲಿತಾ, ವ್ಯವಸ್ಥಾಪಕರು | 9448610077 |
| ಕಾರ್ಪೊರೇಷನ್ ಬ್ಯಾಂಕ್ | ಶ್ರೀ ಗುರುಹರಿನಾಥ ರಾವ್, ಸಹಾಯಕ ಪ್ರಧಾನ ವ್ಯವಸ್ಥಾಪಕರು | 9945246881 |
| ಬ್ಯಾಂಕ್ ಆಫ್ ಬರೋಡ | ಶ್ರೀ ದಿವಾಕರ, ವ್ಯವಸ್ಥಾಪಕರು | 9449856028 |
| ವಿಜಯ ಬ್ಯಾಂಕ್ | ಶ್ರೀ ವಸಂತ ಶೆಟ್ಟಿ, ಸಹಾಯಕ ಪ್ರಧಾನ ವ್ಯವಸ್ಥಾಪಕರು | 9844500099 |
| ಐ.ಸಿ.ಐ.ಸಿ.ಐ ಬ್ಯಾಂಕ್ | ಶ್ರೀ ಶ್ರೀನಿವಾಸುಲು, ವ್ಯವಸ್ಥಾಪಕರು | 9980455700 |
| ಎಕ್ಸಿಸ್ ಬ್ಯಾಂಕ್ | ಶ್ರೀ ರಾಜೇಶ್ ಮೆನನ್, ವ್ಯವಸ್ಥಾಪಕರು | 9980532397 |
| ಐಎನ್‌ಜಿ ವೈಶ್ಯ ಬ್ಯಾಂಕ್ | ಶ್ರೀ ವಿ.ವಿ. ಶೆಟ್ಟಿ, ವ್ಯವಸ್ಥಾಪಕರು | 9980902217 |
| ಹೆಚ್.ಡಿ.ಎಫ್.ಸಿ ಬ್ಯಾಂಕ್ | ಶ್ರೀಮತಿ ನೂರೀನ್, ವ್ಯವಸ್ಥಾಪಕರು | 9343827455 |

ಇದಲ್ಲದೇ ನಿಗಮದ ಕೇಂದ್ರ ಕಛೇರಿಯಲ್ಲಿ ಶ್ರೀ ಬಿ.ಎಸ್. ಶ್ರೀನಿಧಿ, ಮ್ಯಾನೇಜರ್ (ಅಕೌಂಟ್ಸ್) ಇವರನ್ನು ಈ ಬಗ್ಗೆ ದೂರವಾಣಿ ಸಂಖ್ಯೆ 9448990333 ಯಲ್ಲಿ ಸಂಪರ್ಕಿಸಬಹುದು.

ಈ ಬಗ್ಗೆ ಎಲ್ಲ ರೀಟೇಲರ್‌ಗಳು ಸೂಕ್ತ ಸಹಕಾರವನ್ನು ನೀಡಬೇಕೆಂದು ಕೋರಿದೆ.

ಮೇಲ್ಕಂಡ ಸೂಚನೆಗಳು ಎಲ್ಲಾ ಡಿಪೋಗಳಲ್ಲಿ 01.02.2008 ರಿಂದ ಜಾರಿಗೆ ಬರುತ್ತದೆ.

ವಿಶೇಷ ಕರ್ತವ್ಯಾಧಿಕಾರಿಗಳು
(ಹಣಕಾಸು ಮತ್ತು ಲೆಕ್ಕಪತ್ರ)

ಗೆ,

1) ಎಲ್ಲ ಡಿಪೋ ಮ್ಯಾನೇಜರ್‌ಗಳಿಗೆ (ಐ.ಎಂ.ಎಲ್)

ಪ್ರತಿಗಳು:

2) ವ್ಯವಸ್ಥಾಪಕ ನಿರ್ದೇಶಕರು/ಕಾ.ನಿ.ನಿ./ಕಂ.ಕಾ.ಮತ್ತು ಕಾ.ನಿ.ನಿ (ಅಡಿಟ್ ಮತ್ತು ಆಡಳಿತ)
3) ಪ್ರಧಾನ ವ್ಯವಸ್ಥಾಪಕರು / ಉಪ ಪ್ರಧಾನ ವ್ಯವಸ್ಥಾಪಕರುಗಳು
4) ವ್ಯವಸ್ಥಾಪಕರುಗಳು/ಜಂಟಿ ವ್ಯವಸ್ಥಾಪಕರು (ಲೆಕ್ಕಪತ್ರ)/ ಸುತ್ತೋಲೆ ಕಡತ